# 2

# ನಂಬಿಕೆ

ನಾವು ದೇವರನ್ನು ಮತ್ತು ನಂಬಿಕೆಯನ್ನು ತಪ್ಪಾಗಿ ತಿಳಿದುಕೊಂಡಿರುವುದರಿಂದ ನಾವು ಪ್ರಾರ್ಥನೆಯಲ್ಲಿ ಸೋತುಹೋಗುತ್ತೇವೆ. ದೇವರ ಸಾರ್ವಭೌಮತೆಯು ಒತ್ತಿ ಹೇಳಲ್ಪಡದೇ ಇರುವಾಗ, ದೇವರು ತನ್ನ ದೊಡ್ಡಸ್ತಿಕೆಯನ್ನು ಕಳೆದುಕೊಳ್ಳುತ್ತಾನೆ, ಬೈಬಲು ತನ್ನ ಅಧಿಕಾರವನ್ನು ಕಳೆದುಕೊಳ್ಳುತ್ತದೆ, ವಿಧೇಯತೆಯು ತನ್ನ ಸದ್ಗುಣವನ್ನು ಕಳೆದುಕೊಳ್ಳುತ್ತದೆ, ಮತ್ತು ಸಭೆಯು ತನ್ನ ಪ್ರಾಧಾನ್ಯತೆಯನ್ನು ಕಳೆದುಕೊಳ್ಳುತ್ತದೆ. ದೇವರಿಗಾಗಿ ಯೋಗ್ಯವಾದ ಭಯಭಕ್ತಿಯು ಪಶ್ಚಾತ್ತಾಪದ ಪ್ರಾರ್ಥನೆಯ ಫಲಭರಿತ ಭೂಮಿಯಾಗಿದೆ. ದೇವರಿಗಾಗಿ ಪ್ರಾಧಾನ್ಯತೆಯನ್ನು ಪ್ರಾರ್ಥನೆಯು ಕೇಳುತ್ತದೆ.

ಪ್ರಾರ್ಥನೆಯು ನಂಬಿಕೆಯ ಯೋಗ್ಯ ತಿಳುವಳಿಕೆಯನ್ನು ಕೇಳುತ್ತದೆ. ಇಂದು ಜನರು ದೇವರ ಬಗ್ಗೆ ಬಹಳವಾಗಿ ಮಾತಾಡುತ್ತಾರೆ - ಆದರೆ ಬೈಬಲಿನ ದೇವರನ್ನಲ್ಲ. ಪಾಪ, ಕಳೆದುಹೋಗುವಿಕೆ, ದಂಡನೆ, ರೋಷ, ಮತ್ತು ನರಕ ಇವು ಪ್ರಸಿದ್ಧಿಯಾದವುಗಳಾಗಿರುವದಿಲ್ಲ. ಅನೇಕ ಜನರು ಸಮನಾಗಿ ನಂಬಿಕೆಯ ಪ್ರಸಾರಮಾಡುತ್ತಾರೆ - ಆದಾಗ್ಯೂ ನಿಜವಾಗಿಯೂ ಅವರು ಸ್ವೀಕರಿಸುವಂಥದ್ದು "ನಂಬಿಕೆ ಮಾತ್ರವೇ" ಆಗಿರುತ್ತದೆ. ನಂಬಿಕೆ ಮತ್ತು "ನಂಬಿಕೆ ಮಾತ್ರವೇ" ಎಂಬವುಗಳು ಎರಡು ಭಿನ್ನವಾದ ತತ್ವಗಳಾಗಿರುತ್ತವೆ. ನಂಬಿಕೆಯು ಕಾರ್ಯಮಾಡುತ್ತದೆ, ಆದರೆ "ನಂಬಿಕೆ ಮಾತ್ರವೇ" ಎಂಬುದು ಸತ್ತುಹೋಗಿರುತ್ತದೆ (ಯಾಕೋಬ 2:17). ನಾವು ನಂಬಿಕೆಯ ಮುಖಾಂತರ ಮಾತ್ರವೇ ನೀತಿವಂತರೆಂದು ಎಣಿಸಲ್ಪಟ್ಟಿದ್ದೇವೆ, ಆದರೆ "ನಂಬಿಕೆ ಮಾತ್ರದ" ಮುಖಾಂತರ ಅಲ್ಲ. ಇದು ಆಧುನಿಕ ದೈವಜ್ಞಾನ ಶಾಸ್ತ್ರದ ದೊಡ್ಡ ತಪ್ಪಾಗಿರುತ್ತದೆ. ನಂಬಿಕೆಯು ಕಾರ್ಯ ಮಾಡುತ್ತದೆ. ದೇವರು ಯಾವಾಗಲೂ ಜನರನ್ನು ನಂಬಿಕೆಯಿಂದ ರಕ್ಷಿಸಿದ್ದಾನೆ. ನಂಬಿಕೆಯಲ್ಲಿ ಯಾವುದು ಒಳಗೊಂಡಿರುತ್ತದೆ? ನಂಬಿಕೆಯು ಸ್ವೀಕರಿಸುತ್ತದೆ ... ನಂಬಿಕೆಯು ಉತ್ತರ ಕೊಡುತ್ತದೆ ... ನಂಬಿಕೆಯು ವಿಧೇಯವಾಗುತ್ತದೆ ... ನಂಬಿಕೆಯು ಜೀವಿಸುತ್ತದೆ. "ಕ್ರಿಯೆಗಳಿಲ್ಲದ ನಂಬಿಕೆಯು ಸತ್ತದ್ದಾಗಿದೆ" (ಯಾಕೋಬ 2:26) ಎಂದು ಯಾಕೋಬನು ಹೇಳಿದನು. ಅನೇಕ ಜನರು ರಕ್ಷಣೆಯನ್ನು ಅತೀ ಸೂಕ್ಷ್ಮ ವಾದ, ಕ್ಷಣಿಕವಾದ ನಂಬಿಕೆ ಮಾತ್ರವೇ ಮಿತಿಗೊಳಿಸುತ್ತಾರೆ. ಯಾಕೋಬನ ಪ್ರಕಾರವಾಗಿ, ಇದು "ನಂಬಿಕೆಯು ಸತ್ತದ್ದಾಗಿದೆ" ನಂಬಿಕೆಯು ಕ್ಷಣಿಕವಾದದ್ದಾಗಿರುವದಿಲ್ಲ; ಆದರೆ ಜೀವನಕ್ಕಾಗಿದೆ. "ನೀತಿವಂತನು ನಂಬಿಕೆಯಿಂದ ಜೀವಿಸುವನು" (ರೋಮಾಪುರ 1:17; ಗಲಾತ್ಯ 3:11; ನೋಡಿರಿ 10:38). ನಂಬಿಕೆಯು ಕಾರ್ಯಮಾಡುತ್ತದೆ! ಇಬ್ರಿಯ 11 ಓದಿರಿ. ಇದು "ಪ್ರಸಿದ್ಧಿಯ ಪರಲೋಕದ ಮನೆ" ಆಗಿದೆ. ಅಲ್ಲಿ ನಂಬಿಕೆ ಕೆಲಸಮಾಡಿತು. ಪ್ರಾರ್ಥನೆಯು ಸಮನಾಗಿ ಕಾರ್ಯಮಾಡುತ್ತದೆ, ಆದರೆ ಜನರು ಪ್ರಾರ್ಥನೆಯೊಂದಿಗೆ ಕೆಲಸ ಮಾಡುವಾಗ ಮಾತ್ರವೇ. ಪ್ರಾರ್ಥನೆಯು ಪ್ರಯತ್ನವಾಗಿದೆ. ಪ್ರಾರ್ಥನೆಯು ದೀರ್ಘಪ್ರಯತ್ನವಾಗಿದೆ. ಪ್ರಾರ್ಥನೆಯು ಕೃತ್ಯದಲ್ಲಿ ನಂಬಿಕೆಯಾಗಿದೆ. ನಂಬಿಕೆಯ ಜನರು ದೇವರನ್ನು ಪ್ರೀತಿಸುವದರಿಂದ ಮತ್ತು ನಂಬುವದರಿಂದ ಪ್ರಾರ್ಥಿಸುತ್ತಾರೆ. ಈಜುವದರಿಂದ ನೀವು ಈಜುವದನ್ನು ಕಲಿಯುತ್ತೀರಿ. ಪ್ರಾರ್ಥಿಸುವದರಿಂದ ನೀವು ಪ್ರಾರ್ಥಿಸುವದನ್ನು ಕಲಿಯುತ್ತೀರಿ. ಪ್ರಾರ್ಥನೆಯು ತೀವ್ರತೆಯುಳ್ಳದ್ದಾಗಿದೆ. ದೇವರ ಚಿತ್ತವನ್ನು ನಮ್ಮ ಚಿತ್ತಕ್ಕೆ ಬಾಗಿಸುವದಿಲ್ಲ; ನಾವು ನಮ್ಮ ಚಿತ್ತವನ್ನು ಆತನ

ಚಿತ್ತಕ್ಕೆ ಬಾಗಿಸುತ್ತೇವೆ. ದೇವರ ಮೇಲೆ ಪ್ರತಿಯೊಂದೂ ಅವಲಂಬಿಸಿರುವಂತೆ ನಾವು ಪ್ರಾರ್ಥಿಸುತ್ತೇವೆ; ಪ್ರತಿಯೊಂದೂ ನಮ್ಮ ಮೇಲೆ ಅವಲಂಬಿಸಿರುವಂತೆ ನಾವು ಕೆಲಸ ಮಾಡುತ್ತೇವೆ. "ನಮ್ಮ ಚಿತ್ತವು ಪರಲೋಕದಲ್ಲಿ ನೆರವೇರಲಿ" ಎಂದು ನಾವು ಪ್ರಾರ್ಥಿಸುವುದಿಲ್ಲ; "ಭೂಲೋಕದಲ್ಲಿ ದೇವರ ಚಿತ್ತವು ನೆರವೇರಲಿ" ಎಂದು ನಾವು ಪ್ರಾರ್ಥಿಸುತ್ತೇವೆ.

ಕೆಟ್ಟ ವಿಷಯಗಳನ್ನು ಅತೀ ಹೆಚ್ಚು ಕೆಟ್ಟವುಗಳನ್ನಾಗಿ ಮಾಡಲು ಅನೇಕರು ನಂಬಿಕೆಯನ್ನು ಒಂದು ವಿಗ್ರಹವನ್ನಾಗಿ ಕೆಳಮಟ್ಟಕ್ಕೆ ಇಳಿಸುತ್ತಾರೆ - ಅವರು ನಂಬುವದರಲ್ಲಿ ನಂಬುತ್ತಾರೆ. ಎಲ್ಲಾ ತರ್ಕವನ್ನು ವಿರೋಧಿಸಿ, ಅವರು ತಮ್ಮ ನಂಬಿಕೆಯ ಬಗ್ಗೆ ಗರ್ವಿಗಳಾಗಿದ್ದಾರೆ - ಅವರು ತಮ್ಮ ನಂಬಿಕೆಯಲ್ಲಿ ಕೊಚ್ಚಿಕೊಳ್ಳುತ್ತಾರೆ. ನಂಬಿಕೆಯು ದೀನರನ್ನಾಗಿ ಮಾಡುತ್ತದೆ. ನಂಬಿಕೆಯ ಮಹಿಮೆಯು ಉದ್ದೇಶದಲ್ಲಿರುವುದು, ಆದರೆ ಹೊಂದಿಕೊಂಡವನಲ್ಲಿ ಇರುವುದಿಲ್ಲ. ನಂಬಿಕೆಯು ಭ್ರಮೆಯಾಗಿರುವದಿಲ್ಲ. ನಂಬಿಕೆಯು ಅದು ಸತ್ಯವಾಗಿರುವದಿಲ್ಲ ಎಂದು ನೀವು ತಿಳಿದಾಗ ಯಾವುದೋ ಒಂದು ಸತ್ಯವಾಗಿದೆ ಎಂದು ನಂಬುವದಾಗಿರುವದಿಲ್ಲ. ನಂಬಿಕೆಯು ದೇವರಲ್ಲಿ ಭರವಸೆಯಾಗಿದೆ - ನಂಬಿಕೆಯಲ್ಲಿ ನಂಬಿಕೆಯಾಗಿರುವದಿಲ್ಲ. ನಂಬಿಕೆಯು ವಾಸ್ತವಿಕತೆಯನ್ನು ಬದಲಾಯಿಸುವದಿಲ್ಲ. ನಂಬಿಕೆಯು ಅಪ್ರಮಾಣಿಕತೆಯಾಗಿರುವದಿಲ್ಲ. ನಂಬಿಕೆಯು (ಅಬ್ರಹಾಮನ ಉದಾಹರಣೆ) ನಿಶ್ಚಿತತೆಯಾಗಿರುವದಿಲ್ಲ. ಅಬ್ರಹಾಮನಿಗೆ ಮಾರ್ಗದ ಮ್ಯಾಪ್‌ಕೊಡಲ್ಪಡಲಿಲ್ಲ. "ತಾನು ಹೋಗಬೇಕಾದ ಸ್ಥಳವು ಯಾವುದೆಂದು ತಿಳಿಯದೆ ಹೊರಟನು" (ಇಬ್ರಿಯ 11:8ಬಿ). ಇದು ನಂಬಿಕೆಯ ಸಾಹಸವಾಗಿದೆ. ನಂಬಲ್ಪಡಬಹುದಾದ ದೇವರ ಹಸ್ತದೊಳಗೆ ನಮ್ಮ ಹಸ್ತವನ್ನಿಡುವುದು. "ನಿನ್ನ ಸತ್ಯಸಂಧತೆಯು ದೊಡ್ಡದು" (ಪ್ರಲಾಪಗಳು 3:23ಬಿ). ನಂಬಿಕೆಯು ದೀನತೆ, ಅವಲಂಬನೆ, ತ್ಯಜಿಸುವಿಕೆ, ವಿಧೇಯತೆ, ಜೀವನ ಆಗಿದೆ! ನಾವು ನಂಬಿಕೆಯಿಂದ ರಕ್ಷಿಸಲ್ಪಟ್ಟಿದ್ದೇವೆ, ಶುದ್ಧೀಕರಿಸಲ್ಪಟ್ಟಿದ್ದೇವೆ, ಮಹಿಮೆಪಡಿಸಲ್ಪಟ್ಟಿದ್ದೇವೆ. ನಂಬಿಕೆಯು ಪ್ರಾರ್ಥಿಸುತ್ತದೆ. ಪ್ರಾರ್ಥನೆಯು ನಂಬಿಕೆಯ ಧ್ವನಿಯಾಗಿದೆ. ನಂಬಿಕೆಯು ದೇವರಲ್ಲಿ ವಿಶ್ವಾಸವಾಗಿದೆ, ಸ್ವಂತದಲ್ಲಿ ಅಲ್ಲ. ನಂಬಿಕೆಯು ಸ್ವಾರ್ಥಕ್ಕೆ ಮರಣವಾಗಿದೆ ಮತ್ತು ದೇವರಿಗೆ ಸಂಪೂರ್ಣ ಸಮರ್ಪಣೆಯಾಗಿದೆ. ನಮ್ಮ ಪ್ರಾರ್ಥನೆಯು ನಮ್ಮ ವಿಶ್ವಾಸದ ನಿಜವಾದ ತತ್ವವಾಗಿದೆ. ನಂಬಿಕೆಯು ಎಲ್ಲಾ ಉತ್ತರಗಳು ಕೊಡಲ್ಪಡದ್ದಾಗಿದೆ; ನಂಬಿಕೆಯು ಉತ್ತರಗಳಿಲ್ಲದ ಜೀವಿಸುವಿಕೆಯಾಗಿದೆ. ಪ್ರಾರ್ಥನೆಯು ಅದು ಜೀವಿಸಲ್ಪಡುವಾಗ ಮಾತ್ರವೇ ಅರ್ಥಕೊಡುತ್ತದೆ. ಯೋಬನು ನಂಬಿಕೆಯನ್ನು ಮತ್ತು ಪ್ರಾರ್ಥನೆಯನ್ನು ಸಂಪೂರ್ಣವಾಗಿ ನಿರೂಪಿಸುತ್ತಾನೆ: "ಆತನು ನನ್ನನ್ನು ಕೊಲ್ಲುವನು, ಅದಕ್ಕಾಗಿ ಕಾದಿರುತ್ತೇನೆ" (ಯೋಬ 13:15). ಒಂದೇ ಒಂದು ತೀರ್ಮಾನವಿರುವುದು: "ದೇವರು ಜೀವನದಲ್ಲಿ *ದೊಡಬಲ್ಲವನಾಗಿದ್ದಾನೆ!*" ಪ್ರಾರ್ಥನೆಯು "ದೇವರ ಉನ್ನತಿಯನ್ನು" ಕೊಂಡಾಡುತ್ತದೆ.

ನಾನು ಎಂಟು ವರ್ಷದವನಾಗಿದ್ದಾಗ, ನನ್ನ ತಂದೆಯು ನನ್ನನ್ನು ಬ್ಯಾಂಕರನ ಬಳಿಗೆ ಕರೆದುಕೊಂಡು ಹೋದರು. ಅವರು ಅವನಿಗೆ ನಾನು ಒಬ್ಬ ಪಾಲುಗಾರನಾಗಿರುವೆನೆಂದು, ನಾನು ಸಹಿಮಾಡಿದ ಎಲ್ಲಾ ಚೆಕ್ಕುಗಳಿಗೆ ನಗದು ಹಣ ಕೊಡಬೇಕೆಂದು ಹೇಳಿದರು. ನನ್ನ ತಂದೆ ನನಗೆ ಕೊಟ್ಟದ್ದು ಒಂದು ಸದವಕಾಶ, ಒಂದು ಪರಿಶುದ್ಧ ನಂಬಿಕೆ ಆಗಿತ್ತು. ಅವರು ಸಾಯುವವರೆಗೆ ಆ ಅವಕಾಶವು ನನ್ನದಾಗಿತ್ತು. ಆ ಅವಕಾಶವನ್ನು ನಾನೆಂದೂ ದುರುಪಯೋಗ ಪಡಿಸಿಕೊಳ್ಳಲಿಲ್ಲ ಇಲ್ಲವೇ ಅದರ ಲಾಭಹೊಂದಿಕೊಳ್ಳಲಿಲ್ಲ. ಇಂದಿನ ವರೆಗೂ ಇಂಗ್ಲೀಷಿನ ಬ್ಯಾಂಕಿನಲ್ಲಿ ನನ್ನ ಖಾತೆ ಇರುತ್ತದೆ. ತಂದೆಯು

ಬಯಸುವನೆಂದು ನಾನು ತಿಳಿಯುವ ಸಂಗತಿಗಳನ್ನು ಮಾಡಲಿಕ್ಕೆ ಮಾತ್ರವೇ ನಾನು ಅದನ್ನು ಉಪಯೋಗಿಸುತ್ತೇನೆ. ಪ್ರಸಂಗಿಗಳೆಂದು ಕರೆಯಲ್ಪಡುವವರು ಬೇಡಿಕೆಗಳ, ಹಕ್ಕುಗಳ ಮತ್ತು ದೇವರಿಗೆ ಇರುವ ಅವರ ಪ್ರಾರ್ಥನೆಯಲ್ಲಿಯ ಅದರ ಕೇಳು ವಿಕೆಗಳ ಬಗ್ಗೆ ನನಗೆ ತಿಳಿಯುವಾಗ ಅದು ನನಗೆ ಅಘಾತವನ್ನುಂಟು ಮಾಡುತ್ತದೆ. ಪ್ರಾರ್ಥನೆಯು ಸ್ವಾರ್ಥದ ಹಟಮಾರಿತನವಲ್ಲ: "ಅದಕ್ಕಾಗಿ ಕೇಳು ಮತ್ತು ಅದನ್ನು ಸ್ವೀಕರಿಸು"; "ಅದನ್ನು ನಂಬು ಮತ್ತು ಅದನ್ನು ಸಾಧಿಸಿಕೋ." ಈ ಮಾತುಗಳಲ್ಲಿ ವ್ಯಕ್ತಪಡಿಸಿದ ವಿಚಾರಗಳು ಭರವಸೆಯುಳ್ಳವುಗಳಾಗಿವೆ. ಪ್ರಾರ್ಥನೆಯನ್ನು ಅಪಹಾಸ್ಯ ಮಾಡಬೇಡ.

◇◇◇◇◇◇◇◇◇

# ಪ್ರಾರ್ಥನೆಯ ಬಲ

## ಯಾಕೋಬ 5:13-18

*"ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿದೆ" (ಯಾಕೋಬ 5:16ಬಿ).*

ಅತಿ ಬಲಹೀನನಾದ ಭಕ್ತನು ತನ್ನ ಮೊಣಕಾಲುಗಳನ್ನು ಊರುವದನ್ನು ನೋಡುವಾಗ ಸೈತಾನನು ನಡುಗುತ್ತಾನೆ.

ವಿಲಿಯಮ್ ಕೌಪರ್

ನಾವು ಹೆಚ್ಚಾಗಿ ಯಾಕೆ ಪ್ರಾರ್ಥನೆ ಮಾಡಬಾರದು? ದೇವರು ಪ್ರಾರ್ಥನೆಯನ್ನು ಕೇಳುವ ಹಾಗೂ ಪ್ರಾರ್ಥನೆಗೆ ಉತ್ತರಕೊಡುವ ದೇವರು ಆಗಿದ್ದಾರೆ, ನಾವು ಹೆಚ್ಚಾಗಿ ಯಾಕೆ ಪ್ರಾರ್ಥನೆ ಮಾಡಬಾರದು? ಪ್ರಾರ್ಥಿಸುವವರಿಗೆ ಮಹಾಸಂಗತಿಗಳು ಸಂಭವಿಸುತ್ತವೆ. "ದೇವರು ಪ್ರತಿಯೊಂದನ್ನೂ ಪ್ರಾರ್ಥನೆಯಿಂದ ಮಾಡುತ್ತಾನೆ ಮತ್ತು ಅದಿಲ್ಲದೇ ಏನನ್ನೂ ಮಾಡುವದಿಲ್ಲ ಎಂದು ನಂಬಲು ನಾನು ನಡಿಸಲ್ಪಟ್ಟಿದ್ದೇನೆ" ಎಂದು ಜಾನ್ ವೆಸ್ಲಿ ಹೇಳಿದನು. ಪ್ರತೀ ದಿನ ಕನಿಷ್ಠಪಕ್ಷ ನಾಲ್ಕು ತಾಸುಗಳ ವರೆಗೆ ಪ್ರಾರ್ಥಿಸದೇ ಇದ್ದ ಯಾವುದೇ ಪ್ರಸಂಗಿಗೆ ಜಾನ್ ವೆಸ್ಲಿಗೆ ಯಾವ ಗೌರವವೂ ಇರಲಿಲ್ಲ. "ಈ ಜಗತ್ತು ಕನಸು ಕಾಣುವದಕ್ಕಿಂತ ಹೆಚ್ಚಾಗಿ ಪ್ರಾರ್ಥನೆಯಿಂದ ಹೆಚ್ಚು ಸಂಗತಿಗಳು ಸಾಧಿಸಲ್ಪಡುತ್ತವೆ" ಎಂದು ಒಬ್ಬ ತತ್ವಜ್ಞಾನಿ ಗಮನಿಸಿದನು. ತತ್ವಜ್ಞಾನಕ್ಕೆ ಯೋಚಿಸುವುದು ಏನಾಗಿದೆಯೋ ಅದು ಧರ್ಮಕ್ಕೆ ಪ್ರಾರ್ಥನೆಯಾಗಿದೆ. ನಾವು ಪ್ರಾರ್ಥಿಸಲಿಕ್ಕಾಗದಷ್ಟು ಕಾರ್ಯನಿರತರಾ ಗಿರುವಾಗ, ನಾವು ಬಲವನ್ನು ಹೊಂದಿಕೊಳ್ಳದಷ್ಟು ಕಾರ್ಯನಿರತರಾಗಿರುತ್ತೇವೆ. ನಾವು ಯಾಕೆ ಹೆಚ್ಚು ಪ್ರಾರ್ಥಿಸಬಾರದು? ಮನುಷ್ಯನು ಪ್ರಾರ್ಥಿಸುವವರೆಗೆ, ದೇವರ ಅನೇಕ ಆಶೀರ್ವಾದಗಳು ಅವನಿಗೆ ಕೊಡಲ್ಪಡಲಾರವು.

ದೇವರೂ ಸಹ ತಾನೇ ಪ್ರಾರ್ಥನೆಯಿಂದ ಪ್ರಭಾವಿತನಾದನು. ಅನನೀಯನನ್ನು ಸೌಲನ ಬಳಿಗೆ ನಡಿಸುವಾಗ. ದೇವರು "... ಇಗೋ, ಅವನು ಪ್ರಾರ್ಥಿಸುತ್ತಿದ್ದಾನೆ" (ಅಪೊಸ್ತಲರ ಕೃತ್ಯಗಳು 9:11) ಎಂದು ಹೇಳಿದನು. ದೇವರಿಗೆ, ಮನುಷ್ಯನಿಂದ ಪ್ರಾರ್ಥನೆಗಿಂತ ಹೆಚ್ಚು ಅದ್ಭುತವಾದದ್ದು ಯಾವದೂ ಇರುವುದಿಲ್ಲ. "ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು

ಕೇಳುತ್ತಾನೆಂಬ ಧೈರ್ಯವು ಆತನ ವಿಷಯವಾಗಿ ನಮಗುಂಟು. ನಾವು ಏನು ಬೇಡಿಕೊಂಡರೂ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬುದು ನಮಗೆ ಗೊತ್ತಾಗಿದ್ದರೆ ನಾವು ಬೇಡಿದವುಗಳು ಆತನಿಂದ ನಮಗೆ ದೊರೆತೆವೆಂಬುದೂ ನಮಗೆ ಗೊತ್ತಾಗಿದೆ'' (1 ಯೋಹಾನ 5:14, 15).

ಜಗತ್ತನ್ನು ಬದಲಾಯಿಸಿದ ಮತ್ತು ಚಲಿಸಿದ ಜನರು ಪ್ರಾರ್ಥನೆಯ ಜನರಾಗಿದ್ದರು. ದೇವರೊಂದಿಗೆ ಮಾತಾಡುವುದು, ದೇವರಿಂದ ಸ್ವಾಗತಿಸಲ್ಪಡುವುದು, ದೇವರಿಂದ ಉತ್ತರ ಪಡೆಯುವುದು ಎಂಥಾ ಭಯಭಕ್ತಿಯ ಅವಕಾಶವಾಗಿದೆಯಲ್ಲವೇ! ದೇವರು ಮನುಷ್ಯನಿಗೆ ತನ್ನನ್ನು ಒಪ್ಪಿಸಿಕೊಡಲೂ ಬಹುದು! ಇದು ಬಲಹೀನತೆಯ ಸಂಗೀತ ವಾಗಿರುವದಿಲ್ಲ, ಆದರೆ ಬಲದ ಪ್ರಕಟನೆಯಾಗಿರುತ್ತದೆ. ದೇವರು ಹಾಗೆ ಅದನ್ನು ಚಿತ್ರಿಸಿದನು. ಜೀವನದ ಆತನ ಯೋಜನೆಯಲ್ಲಿ, ಸಂಗತಿಗಳು ಸಂಭವಿಸುವಂತೆ ಮಾಡುವುದಕ್ಕಾಗಿ ಮಾನವ ಪ್ರಾರ್ಥನೆಗೆ ದೇವರು ಒಂದು ಹೊಸ ಮಾರ್ಗವನ್ನು ಸೃಷ್ಟಿಸಿರುವನು.

*ಪ್ರಾರ್ಥನೆಯು ಬಲವಾದದ್ದಾಗಿದೆ, ಆದರೂ ನಾವು ಪ್ರಾರ್ಥನೆಯಲ್ಲಿ ನಂಬುವದಿಲ್ಲ - ನಾವು ದೇವರಲ್ಲಿ ನಂಬುತ್ತೇವೆ.* ಪ್ರಾರ್ಥನೆಯು ಗುಣಪಡಿಸುವದಿಲ್ಲ - ದೇವರು ಗುಣಪಡಿಸುತ್ತಾನೆ. ಪ್ರಾರ್ಥನೆಯು ದೇವರಿಗೆ ನಮ್ಮ ಮಾರ್ಗವಾಗಿದೆ. ಪ್ರಾರ್ಥನೆಯಲ್ಲಿ ನಾವು ಸರ್ವಶಕ್ತನಾದ ದೇವರನ್ನು ನಮ್ಮ ಭಾಗಿಯನ್ನಾಗಿ ಮಾಡಿಕೊಳ್ಳುತ್ತೇವೆ! ವಿಶ್ವದ ದೇವರು ನಮ್ಮನ್ನು ಕೇಳಲು, ನಮಗೆ ಸಹಾಯಮಾಡಲು ಬಯಸುತ್ತಾನೆ! ಪ್ರಾರ್ಥನೆಯಲ್ಲಿ ಬಲವು ಇರುತ್ತದೆ.

## ಪ್ರಾರ್ಥಿಸು!

''ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿದೆ'' (ಯಾಕೋಬ 5:16ಬಿ). ಅದನ್ನು ನಂಬು! ಅದನ್ನು ರೂಡಿಸು! ''ಎಲೀಯನು ನಮ್ಮಂಥ ಸ್ವಭಾವವುಳ್ಳವನಾಗಿದ್ದನು; ಅವನು ಮಳೆಬರಬಾರದೆಂದು ಬಹಳವಾಗಿ ಪ್ರಾರ್ಥಿಸಲು ಮೂರು ವರುಷ ಆರು ತಿಂಗಳವರೆಗೂ ಮಳೆಬೀಳಲಿಲ್ಲ. ತಿರಿಗಿ ಅವನು ಪ್ರಾರ್ಥನೆ ಮಾಡಲು ಆಕಾಶವು ಮಳೆಗರೆಯಿತು, ಭೂಮಿಯು ಬೆಳೆಯಿತು'' (ಯಾಕೋಬ 5:17, 18). ಎಲೀಯನ ಬಲವು ಪ್ರಾರ್ಥನೆಯಾಗಿತ್ತು. ದೇವರ ಸೇವಕರ ಅತಿ ಪ್ರಾಮುಖ್ಯವಾದ ಕೆಲಸವು ಪ್ರಾರ್ಥನೆಯಾಗಿದೆ. *ಮೊದಲು ಪ್ರಾರ್ಥಿಸಿರಿ!*

ಎಲೀಯನು ಪ್ರಾರ್ಥಿಸಿದನು. ಗ್ರೀಕಿನಲ್ಲಿ ಇದು ಆಸಕ್ತಿಯುಳ್ಳದ್ದಾಗಿದೆ: ''ತನ್ನ ಪ್ರಾರ್ಥನೆಯಲ್ಲಿ ಅವನು ಪ್ರಾರ್ಥಿಸಿದನು'' ಎಂದಿದೆ. ಎಲೀಯನು ದೇವರಲ್ಲಿ ನಂಬಿದನು, ಆದುದರಿಂದ ಅವನು ಪ್ರಾರ್ಥಿಸಿದನು. ಯಥಾರ್ಥವಾಗಿ, ಅತ್ಯಾಸಕ್ತಿಯಿಂದ ನಂಬಿಕೆಯಿಂದ, ಎಲೀಯನು ಪ್ರಾರ್ಥಿಸಿದನು! ಎಲೀಯನು ಪ್ರಾರ್ಥನೆಗಳನ್ನು ಹೇಳ ಲಿಲ್ಲ; ಅವನು ತನ್ನ ಪ್ರಾರ್ಥನೆಗಳನ್ನು ಪ್ರಾರ್ಥಿಸಿದನು.

ಇಲ್ಲಿ ಇನ್ನೊಂದು ಅಮೂಲ್ಯವಾದ ವಿಚಾರವಿದೆ: ''ಎಲೀಯನು ನಮ್ಮಂಥ ಸ್ವಭಾವವುಳ್ಳವನಾಗಿದ್ದನು'' (ವಚನ 17). ಬೈಬಲಿನ ನಾಯಕರುಗಳನ್ನು ''ಅತಿ ಶ್ರೇಷ್ಠ ನಟರನ್ನಾಗಿ'' ಮಾಡುವ ಪ್ರವೃತ್ತಿಯುಳ್ಳವರಾಗುತ್ತೇವೆ. ಅದಕ್ಕೆ ವ್ಯತಿರಿಕ್ತವಾಗಿ ಅವರು ನಮ್ಮ ಹಾಗೆ ಮಾನವರಾಗಿರುತ್ತಾರೆ. ದೇವರು ಎಲೀಯನನ್ನು ಆಲಿಸಿದನು; ದೇವರು ನಮ್ಮನ್ನು ಆಲಿಸುತ್ತಾನೆ! ''ಯಾಕಂದರೆ ಕರ್ತನು ನೀತಿವಂತರನ್ನು ಕಟಾಕ್ಷಿಸುತ್ತಾನೆ, ಆತನು ಅವರ ವಿಜ್ಞಾಪನೆಗಳಿಗೆ ಕಿವಿಗೊಡುತ್ತಾನೆ'' (1 ಪೇತ್ರ 3:12). 10,000 ಜನ ಸೈನಿಕರಿಗಿಂತ ಹೆಚ್ಚಾಗಿ ಜಾನ್ ನೊಕ್ಸನ್ ಪ್ರಾರ್ಥನೆಗಳಿಗೆ ತಾನು ಭಯಪಟ್ಟೆನು ಎಂದು

ಕ್ವೀನ್ ಮೇರಿ ಹೇಳಿದಳು. ಪ್ರಾರ್ಥನೆಯಲ್ಲಿ ಬಲವಿರುತ್ತದೆ! ಅದು ನಮ್ಮದಾಗಿದೆ!

ಪ್ರಾರ್ಥನೆಯು "ಬಹಳವಾದದ್ದನ್ನು" - "ಬಹಳವಾದದ್ದನ್ನು" ವಿರುದ್ಧ "ಅಲ್ಪವಾದದ್ದನ್ನು" ಲಭ್ಯವಾಗಿರುತ್ತದೆ. ಪ್ರಾರ್ಥನೆಯು ದೇವರನ್ನು ಕಾರ್ಯನಿರತನನ್ನಾಗಿ ಮಾಡುತ್ತದೆ! ದೇವರು ಕಾರ್ಯಮಾಡುತ್ತಾನೆ! ಜಗತ್ತನ್ನು ಚಲಿಸುವ ಭುಜವನ್ನು ಪ್ರಾರ್ಥನೆಯು ಚಲಿಸುವಂತೆ ಮಾಡುತ್ತದೆ. ಪ್ರಾರ್ಥನೆಯು ಎಷ್ಟು ಬಲವಾದದ್ದಾಗಿರುವದಲ್ಲವೇ? ದೇವರು ಎಷ್ಟು ಬಲವುಳ್ಳವನಾಗಿರುವನಲ್ಲವೇ? ಯೆರೂಸಲೇಮಿನ ಸಭೆಯು ಪ್ರಾರ್ಥಿಸಿದಾಗ, ಮನೆಯು ನಡುಗಿತು (ಅಪೊಸ್ತಲರ ಕೃತ್ಯಗಳು 4:31). ನಾವು ಬೇಡುವುದಕ್ಕಿಂತಲೂ ಯೋಚಿಸುವದಕ್ಕಿಂತಲೂ ಹೆಚ್ಚಾದದ್ದನ್ನು ಮಾಡಲು ದೇವರು ವಾಗ್ದಾನ ಮಾಡಿದನು (ಎಫೆಸ 3:20). ನಾವು ಯಾಕೆ ಹೆಚ್ಚು ಪ್ರಾರ್ಥಿಸಬಾರದು? ದೇವರ ಶಕ್ತಿಯು ತಟ್ಟಲ್ಪಟ್ಟರೆ ಸಭೆಯು ಎಷ್ಟೋ ಬಲವುಳ್ಳದ್ದು ಆಗುವದಲ್ಲವೇ? ಪ್ರಾರ್ಥನೆಯಿಲ್ಲದ ಸಭೆಯು ಬಲವಿಲ್ಲದ ಸಭೆಯಾಗಿರುತ್ತದೆ. ಪ್ರಾರ್ಥಿಸುವ ಸಭೆಯು ಬೆಳೆಯದೇ ಇರುವ ಸಭೆಯಾಗಿ ಇರುವುದನ್ನು ನೀವು ಎಲ್ಲಿಯೂ ಕಂಡುಕೊಳ್ಳುವದಿಲ್ಲ. ಮೊದಲು ಪ್ರಾರ್ಥಿಸಿರಿ! 32,000 ದೇವರ ವಾಗ್ದಾನಗಳನ್ನು ಬೈಬಲಿನಲ್ಲಿ ಕಂಡುಕೊಳ್ಳುತ್ತೇವೆ! ದೇವರು ಪ್ರಾರ್ಥನೆಯನ್ನು ಕೇಳುತ್ತಾನೆ ಮತ್ತು ಉತ್ತರಕೊಡುತ್ತಾನೆ. ದೇವರ ಪ್ರತಿಯೊಂದು ವಾಗ್ದಾನವು ಕೈಕೊಳ್ಳಲ್ಪಡುತ್ತದೆ.

ಎಲೀಯನು ಪ್ರಾರ್ಥನೆ ಮಾಡಿದನು, ಮತ್ತು ಆಗ ಮಳೆಯಾಗಲಿಲ್ಲ; ಅವನು ಪುನಃ ಪ್ರಾರ್ಥಿಸಿದನು, ಮಳೆ ಆಯಿತು. ಎರಡೂ ಪ್ರಾರ್ಥನೆಗಳು ಅನುದಿನದ ಜೀವಿ ತವನ್ನು ಒಳಗೊಂಡಿದ್ದವು. ಪಾಲೆಸ್ತೀನದಲ್ಲಿ ಮಳೆಯು ಭೂಮಧ್ಯ ಸಮುದ್ರದಿಂದ ಬಂದಿತು. ಯಾವ ದಿಕ್ಕಿನ ಕಡೆಗೆ ನೋಡಬೇಕೆಂದು ಎಲೀಯನು ತಿಳಿದಿದ್ದನು. ಹೌದು, ದೇವರ ವಿಶೇಷ ನಡಿಸುವಿಕೆಯನ್ನು ನೋಡುವಲ್ಲಿ ಸಮಸ್ಯೆಗಳು ಒಳಗೊಂಡಿರುತ್ತವೆ. ದೇವರು ತಾನೇ ಒಂದು ರಹಸ್ಯವಾಗಿದ್ದಾನೆ. ಎಲೀಯನು ಅನುದಿನದ ಜೀವಿತದಲ್ಲಿಯ ನಿಜವಾದ ಜನರೊಂದಿಗೆ ಒಳಗೊಂಡಿದ್ದನು. ಅನುದಿನದ ಜೀವಿತಗಳಲ್ಲಿ ದೇವರು ಮನುಷ್ಯರೊಂದಿಗೆ ಕಾರ್ಯಮಾಡುತ್ತಾನೆ. ಎಂಥಾ ದೇವರು!

ಪ್ರಾರ್ಥನೆಯು ಅತೀ ದೊಡ್ಡ ಬಲವಾಗಿದೆ ಇಲ್ಲವೇ ಅತೀ ದೊಡ್ಡ ವಂಚನೆಯಾಗಿದೆ. ನಾವು ಕೆಲಸ ಮಾಡುವಾಗ, ಕೆಲಸ ಮಾಡುತ್ತೇವೆ; ನಾವು ಪ್ರಾರ್ಥನೆ ಮಾಡುವಾಗ, ದೇವರು ಕೆಲಸ ಮಾಡುತ್ತಾನೆ! ನಮ್ಮ ಆತ್ಮಿಕ ಬಲವು ನಮ್ಮ ಪ್ರಾರ್ಥನೆಗಳ ಮೇಲೆ ಅವಲಂಭಿಸಿರುತ್ತದೆ. ಒಬ್ಬ ಕ್ರೈಸ್ತನನ್ನು ಅವನ *ಪಾದಗಳ* ಮೇಲೆ ನಿಲ್ಲಿಸುವುದಕ್ಕೆ ಅತ್ಯುತ್ತಮವಾದ ಮಾರ್ಗವು ಅವನನ್ನು ಅವನ *ಮೊಣಕಾಲುಗಳ* ಮೇಲೆ ಹಾಕುವುದಾಗಿದೆ. ಕ್ರೈಸ್ತರು ತಮ್ಮ *ಸಮಸ್ಯೆಗಳ* ಮೇಲೆ ಕೇಂದ್ರೀಕರಿಸುವದರಿಂದ ಅಲ್ಲ, ಆದರೆ ತಮ್ಮ ಬಲಗಳ ಮೇಲೆ ಕೇಂದ್ರೀಕರಿಸುವದರಿಂದ ಜೀವನವನ್ನು ಎದುರಿಸತಕ್ಕದ್ದು. ಕ್ರೈಸ್ತರು *ಪ್ರಾರ್ಥಿಸುವರು ಇಲ್ಲವೇ ನಾಶವಾಗಿ* ಹೋಗುವರು. ಹೊಸ ಒಡಂಬಡಿಕೆಯ ಸಭೆಯು ಪ್ರಾರ್ಥಿಸುವ ಸಭೆಯಾಗಿತ್ತು (ಅಪೊಸ್ತಲ ಕೃತ್ಯಗಳು 2:42; 4:23-31). ಪ್ರಾರ್ಥನೆಯಿಲ್ಲದ ಅಧ್ಯಯನಗಳಿಂದ, ಪ್ರಸಂಗಗಳಿಂದ ಮತ್ತು ಕೆಲಸದಿಂದ ಸೈತಾನನು ಯಾವುದಕ್ಕೂ ಭಯಪಡುವುದಿಲ್ಲ. ಅವನು ನಮ್ಮ ಕೆಲಸದ ಕಡೆಗೆ ನಗುತ್ತಾನೆ, ಮತ್ತು ನಮ್ಮ ಬುದ್ಧಿಗಾಗಿ ತಮಾಷೆಮಾಡುತ್ತಾನೆ, ಆದರೆ ನಾವು ಪ್ರಾರ್ಥನೆ ಮಾಡುವಾಗ ನಡುಗುತ್ತಾನೆ. ಪ್ರಾರ್ಥನೆಯಲ್ಲಿ ಬಲವಿದೆ ಅದನ್ನು ನಂಬಿರಿ.

# ದೇವರು ಪ್ರಾರ್ಥನೆಗೆ ಉತ್ತರ ಕೊಡುತ್ತಾನೆ!

ಒಬ್ಬ ಮನುಷ್ಯನು ಮಾರ್ಟಿನ್ ಲೂಥರನಿಗೆ, ‘‘ನನ್ನ ಪ್ರಾರ್ಥನೆಗಳು ಕೇಳಲ್ಪಡುತ್ತವೆಯೋ ಎಂಬುದಕ್ಕೆ ನನಗೆ ಹೆಚ್ಚು ನಂಬಿಕೆಯಿರುವುದಿಲ್ಲ’’ ಎಂದು ಹೇಳಿದನು. “ನೀನು ಯಾಕೆ ಪ್ರಾರ್ಥನೆ ಮಾಡಬೇಕು ಎಂಬುದಕ್ಕೆ ಅದೇ ಕಾರಣವಾಗಿದೆ” ಎಂದು ಲೂಥರನು ಉತ್ತರಕೊಟ್ಟನು. ಪ್ರತಿಯೊಂದು ಕ್ರೈಸ್ತ ಪ್ರಾರ್ಥನೆಯು ಉತ್ತರಿಸಲ್ಪಡುತ್ತದೆ! ವಿಶ್ವಾಸಿಗಳಿಂದ ಉತ್ತರಿಸಲ್ಪಡದ ಪ್ರಾರ್ಥನೆಗಳು ಇರಲಾರವು. ‘‘ಪ್ರಾರ್ಥಿಸಲ್ಪಡದ ಪ್ರಾರ್ಥನೆ’’ ಇರುತ್ತದೆ, ಆದರೆ ‘‘ಉತ್ತರವಿಲ್ಲದ ಪ್ರಾರ್ಥನೆ’’ ಎಂದೂ ಇರುವುದಿಲ್ಲ. ಪ್ರಾರ್ಥನೆಯು ದೇವರ ಅಸಮ್ಮತಿಯನ್ನು *ಜಯಿಸುವುದಾಗಿರುವದಿಲ್ಲ*; ಅದು ದೇವರ *ಇಷ್ಟವಾಗಿರುತ್ತದೆ.* ದೇವರು ಪ್ರಾರ್ಥನೆಗೆ ಉತ್ತರ ಕೊಡುತ್ತಾನೆ! ಇದು ನಮ್ಮ ಸಮಸ್ಯೆಯಾಗಿರುವದಿಲ್ಲ. ದೇವರು ಪ್ರಾರ್ಥನೆಗೆ ಹೇಗೆ ಉತ್ತರ ಕೊಡುತ್ತಾನೆ?

(1) *ದೇವರು ‘‘ಹೌದು’’ ಎಂದು ಉತ್ತರ ಕೊಡುತ್ತಾನೆ.* ದೇವರು (ಪ್ರೀತಿಸುವ ತಂದೆಯಂತೆ) ನಾವು ಅಪೇಕ್ಷಿಸುವುದನ್ನು ನಮಗೆ ಕೊಡಲು ಬಯಸುತ್ತಾನೆ. ಎಲೀಯನು ಪ್ರಾರ್ಥಿಸಿದನು, ಮತ್ತು ಅಗ ಮಳೆ ಬರಲಿಲ್ಲ. ಎಲೀಯನು ಪ್ರಾರ್ಥಿಸಿದನು ಆಗ ಮಳೆ ಬಂದಿತು. ಹನ್ನಳು ಒಬ್ಬ ಮಗನಿಗಾಗಿ ಪ್ರಾರ್ಥಿಸಿದಳು (1 ಸಮುವೇಲ 1:11). ದೇವರು ಆಕೆಯನ್ನು ಸಮುವೇಲನಿಂದ ಮತ್ತು ಇತರ ಮಕ್ಕಳಿಂದ ಆಶೀರ್ವದಿಸಿದನು. ದೇವರು ಕೊಡುವದಕ್ಕಾಗಿ ಇರುತ್ತಾನೆ. ಹಿಜ್ಕೀಯನ್ನು ಜೀವಿಸಲು ಪ್ರಾರ್ಥಿಸಿದನು; ದೇವರು ಅವನ ಜೀವಿತಕ್ಕೆ ಹದಿನೈದು ವರ್ಷಗಳನ್ನು ಕೂಡಿಸಿದನು (ಯೆಶಾಯ 38:2-5). ಹೀಗಿದ್ದರೂ, ನಮ್ಮ ಪ್ರಾರ್ಥನೆಗೆ ಉತ್ತರಗಳನ್ನು ಸೂಚಿಸುವ ಪ್ರವೃತ್ತಿಯುಳ್ಳವರಾಗುತ್ತೇವೆ. ದೇವರು ಒಂದೇ ರೀತಿಯಲ್ಲಿ ಉತ್ತರ ಕೊಡಬಲ್ಲನು ಎಂದು ಯೋಚಿಸುತ್ತೇವೆ ಮಕ್ಕಳು ಅತ್ಯುತ್ತಮವಾಗಿ ತಿಳಿಯುವದಿಲ್ಲ; ತಂದೆ ತಾಯಿಗಳು ತಿಳಿಯುತ್ತಾರೆ. ಜನರು ತಮಗೆ ಏನು ಅಗತ್ಯವಿದೆಯೆಂಬುದ್ನು ತಿಳಿಯುವುದಿಲ್ಲ; ದೇವರು ತಿಳಿದಿರುತ್ತಾನೆ. ದೇವರು ‘‘ಹೌದು’’ ಎಂಬುದಕ್ಕೆ ಅನಿರೀಕ್ಷಿತ ಫಲಗಳಿರಬಹುದು! ನಮ್ಮ ಜೀವಿತಗಳು ಕಿತ್ತು ಹಾಕಲ್ಪಡಬಹುದು. ಇದು ಪ್ರಾರ್ಥನೆಯಲ್ಲಿ ‘‘ಗಂಡಾಂತರ’’ ಆಗಿದೆ. ನೀವು ಹೇಗೆ ಪ್ರಾರ್ಥಿಸುವಿರಿ ಎಂಬುದರ ಬಗ್ಗೆ ಜಾಗರೂಕತೆಯಿಂದ ಇರ್ರಿ - ನೀವು ಅದನ್ನು ಪಡೆದುಕೊಳ್ಳಬಹುದು! ವಿಶ್ವಾಸದ ನಡೆಯುವಿಕೆಯು, ನಾವು ಯಾವಾಗಲೂ ದೇವರಿಂದ ಆನಿರೀಕ್ಷಿತವಾದದ್ದಕ್ಕೆ ಸಿದ್ಧರಾಗಿರತಕ್ಕದ್ದು ಎಂಬುದನ್ನು ಸೂಚಿಸುತ್ತದೆ. ದೇವರನ್ನು ‘‘ಪೆಟ್ಟಿಗೆಯಲ್ಲಿ ಹಾಕಿಡಲಿಕ್ಕಾಗುವದಿಲ್ಲ’’ ನಿಮಗೆ ಸಾಧ್ಯವಾದಷ್ಟು ಪ್ರಾರ್ಥನೆ ಮಾಡಿರಿ - ನಿಮಗೆ ಸಾಧ್ಯವಾಗದಷ್ಟನ್ನಲ್ಲ. ದೇವರು ನಮ್ಮ ಜೀವನಗಳಲ್ಲಿ ಆಹ್ವಾನಿಸಲ್ಪಟ್ಟಾಗ, ಎಲ್ಲಾ ರೀತಿಯ ಸಂಗತಿಗಳು ಸಂಭವಿಸಬಹುದು ‘‘ದೇವರ ಚಿತ್ತಕ್ಕಾಗಿ’’ ಪ್ರಾರ್ಥಿಸಿರಿ.

(2) *ದೇವರು ‘‘ಇಲ್ಲ’’ ಎಂದು ಉತ್ತರ ಕೊಡುತ್ತಾನೆ.* ‘‘ಇಲ್ಲ’’ ಎಂಬುದೂ ಒಂದು ಉತ್ತರವಾಗಿದೆ! ಇದು ಉತ್ತರವೆಂಬುದನ್ನು ಅಲ್ಲಗಳೆಯಲು ಯೋಚಿಸುತ್ತೇವೆ. ಪ್ರಾರ್ಥನೆಯು ಏನೂ ಕೊಡದೇ ಏನಾದರನ್ನು ಪಡೆದುಕೊಳ್ಳುವ ಅಗ್ಗದ ಮಾರ್ಗವಾಗಿರುವುದಿಲ್ಲ. ದೇವರು ದೇವರಾಗಿದ್ದಾನೆ; ಮತ್ತು ಮನುಷ್ಯನು ದೇವರಾಗಿರುವುದಿಲ್ಲ. ದೇವರ ಮೇಲೆ ಮನುಷ್ಯನನ್ನು ಯಜಮಾನನ್ನಾಗಿ ಮಾಡಲು ಪ್ರಾರ್ಥನೆಯು ಎಂದೂ ಉದ್ದೇಶಿಸಲ್ಪಟ್ಟಿರುವದಿಲ್ಲ. ಬಹಳ ಜನರು ‘‘ಹೌದು’’ ಎಂಬುದನ್ನು ಉತ್ತರಿಸಲ್ಪಟ್ಟ ಪ್ರಾರ್ಥನೆಗಳೊಂದಿಗೆ ಸಮನಾಗಿ ಮಾಡುತ್ತಾರೆ. ತಂದೆಗಳು ಯಾವಾಗಲೂ ತಮ್ಮ ಮಕ್ಕಳಿಗೆ

ಅವರು ಕೇಳಿದ್ದನ್ನು ಕೊಡಲಾರರು. ನಮ್ಮಲ್ಲಿ ಹೆಚ್ಚಾದವರು ನಾವು ಕೇಳಿಕೊಂಡದ್ದನ್ನು ಕೊಡದೇ ಇರುವಂಥದ್ದಕ್ಕಾಗಿ ದೇವರಿಗೆ ಉಪಕಾರ ಹೇಳಲು ಸಾಕಷ್ಟು ದೀರ್ಘವಾಗಿ ಜೀವಿಸಿದ್ದೇವೆ. ಪ್ರತಿಯೊಂದು "ಹೌದು" ಎಂಬುದು ಸಮನಾಗಿ ಒಂದು "ಇಲ್ಲ" ಎಂಬುದನ್ನು ಒಳಗೊಂಡಿರುತ್ತದೆ.

ದೇವರು ತನ್ನ ಅಮೂಲ್ಯ ಕುಮಾರನಿಗೆ ಗೆತ್ಸೇಮನೆಯಲ್ಲಿ "ಇಲ್ಲ" ಎಂದು ಮೂರು ಸಲ ಹೇಳಿದನು. 2 ಕೊರಿಂಥ 12:8, 9ರಲ್ಲಿ ದೇವರು ಪೌಲನಿಗೆ ಅವನ ಮುಳ್ಳಿನ ವಿಷಯವಾಗಿ, "ಇಲ್ಲ" ಎಂದು ಮೂರು ಸಲ ಹೇಳಿದನು. ಕೆಲವು ಸಲ "ಇಲ್ಲ" ಎಂಬುದು ಅತ್ಯುತ್ತಮ ಉತ್ತರವಾಗಿದೆ. ಪ್ರಾರ್ಥನೆಯಲ್ಲಿ ನಾವು ದೇವರೊಂದಿಗೆ ಮಾತಾಡುತ್ತೇವೆ. ದೇವರನ್ನು "ಸೋಲಿಸಲು" ನಾವು ಪ್ರಯತ್ನಿಸುವುದಿಲ್ಲ. ಪ್ರಾರ್ಥನೆಯಲ್ಲಿ ನಾವು ಮೆಚ್ಚಿಕೊಳ್ಳಲಿ ಇಲ್ಲವೇ ಮೆಚ್ಚಿಕೊಳ್ಳದಿರಲಿ, ನಾವು ದೇವರ ಉತ್ತರದಲ್ಲಿ ಭರವಸೆಯುಳ್ಳವರಾಗಿರುತ್ತೇವೆ. ಯೇಸುವು ತನ್ನ ಪ್ರಾರ್ಥನೆಯಿಂದ ಏನನ್ನು ಹೊಂದಿಕೊಂಡನು? ಕಲ್ವಾರಿಯನ್ನು!

(3) *ದೇವರು "ಕಾದುಕೊಂಡಿರುತ್ತಾರೆ."* ಲೂಕ 1ರಲ್ಲಿ ನಾವು ಒಂದು ಆಕರ್ಷಕವಾದ ಕಥೆಯನ್ನು ಕಂಡುಕೊಳ್ಳುತ್ತೇವೆ. ಜಕರೀಯನು ಮತ್ತು ಎಲಿಜಬೇತರು ನಂಬಿಗಸ್ತರಾಗಿದ್ದರು. ಹೀಗಿದ್ದರೂ, ಆಕೆ ಬಂಜೆಯಾಗಿದ್ದಳು. ವರ್ಷಗಳವರೆಗೆ ಅವರು ಒಂದು ಮಗುವಿಗಾಗಿ ಪ್ರಾರ್ಥಿಸಿದರು. ಅವರಿನ್ನೂ - ನೋವಿನಲ್ಲಿ ಪ್ರಾರ್ಥಿಸಿದರು. ಒಬ್ಬ ದೇವದೂತನು ಜಕರೀಯನಿಗ ಒಬ್ಬ ಮಗನನ್ನು ವಾಗ್ದಾನ ಮಾಡಿದನು. ಅವನು ಚಕಿತನಾಗಲಿಲ್ಲ! ಯಾಕೆ? ಯಾಕಂದರೆ ಅವನು ಆ ಮಗುವನ್ನು ಇಪ್ಪತ್ತು ವರ್ಷಗಳ ಮೊದಲೇ ಬಯಸಿದ್ದನು! ನಮ್ಮ ಸಮಯ ಕಾರ್ಯಕ್ರಮದಂತೆ ಹೋಗಬೇಕೆಂದು ನಮ್ಮಲ್ಲಿ ಅನೇಕರು ದೇವರನ್ನು ಕೇಳಿಕೊಳ್ಳುತ್ತೇವೆ. ದೇವರ ಸಮಯವು ಭಿನ್ನವಾಗಿರಬಹುದು. "ಗಟ್ಟಿಯಾಗಿ ಕೂಗದ ಬಾಯಿಯು ಮುಚ್ಚಲ್ಪಡುವುದು!" ಸ್ನಾನಿಕನಾದ ಯೋಹಾನನು ಜನಿಸುವವರೆಗೆ ಜೆಕರೀಯನು ಮಾತಿಲ್ಲದವನಾಗಿದ್ದನು. ಎಂಥಾ ಮಗನು! ಕರ್ತನ ಮೇಲೆ ಕಾದುಕೊಂಡಿರಲು ಅವರು ಸಿದ್ಧರಾಗಿರಲಿಲ್ಲ, ಆದರೆ "ಕಾಲವು ಪರಿಪೂರ್ಣವಾದಾಗ" ದೇವರು ತಮಗೆ ಕೊಟ್ಟ ಮಗನ ಕಡೆಗೆ ನೋಡಿದರು!

ಇನ್ನೊಂದು ಕುತೂಹಲದ ಪ್ರಾರ್ಥನೆಯು ಆದಿಕಾಂಡ 18:23-32ರಲ್ಲಿ ಇರುತ್ತದೆ. ಅಬ್ರಹಾಮನು ಸೋದೋಮನ್ನು ರಕ್ಷಿಸಲು ಪ್ರಾರ್ಥಿಸಿದನು. ಅವನು ದೇವರೊಂದಿಗೆ ಬೇಡಿ ಕೊಂಡನು. ಐವತ್ತು - ಹೌದು, ಹತ್ತು ಜನ ನೀತಿವಂತ ಪ್ರಾಣಗಳು ಸೋದೋಮನ್ನು ಉಳಿಸಬಹುದಿತ್ತು. ಆಗ ಅಬ್ರಹಾಮನು ಸುಮ್ಮನಾದನು! ಐದು ಜನರು, ಇಬ್ಬರು ಇಲ್ಲವೇ ಒಬ್ಬನು ಸೋದೋಮನ್ನು ಉಳಿಸಬಹುದಿತ್ತಲ್ಲವೇ? ಯಾರಿಗೂ ತಿಳಿದಿರುವದಿಲ್ಲ ... ಯಾಕಂದರೆ ಅಬ್ರಹಾಮನ ಕರ್ತನಮೇಲೆ ಕಾದುಕೊಂಡಿರುವುದನ್ನು ನಿಲ್ಲಿಸಿಬಿಟ್ಟನು.

ಯೆರೆಮೀಯ 42:4-7ರಲ್ಲಿ ದೇವರು ಯೆರೆಮೀಯನ ಪ್ರಾರ್ಥನೆಗೆ ಉತ್ತರಕೊಟ್ಟನು, ಆದರೆ ಅದನ್ನು ಮಾಡಲು ಆತನು ಹತ್ತುದಿನ ಕಾದುಕೊಂಡಿದ್ದನು. ಯೇಸುವು, ತನ್ನ ಪ್ರಾರ್ಥನೆಯ ತತ್ವಗಳಲ್ಲಿ ತಾಳಿಕೊಂಡಿರುವದರ ಬಗ್ಗೆ ಹಲವಾರು ಪಾಠಗಳನ್ನು ಬೋಧಿಸಿದರು. ನೀನು ನಂಬುವದನ್ನು ನಿಲ್ಲಿಸಿದಾಗ, ನೀನು ಪ್ರಾರ್ಥಿಸುವದನ್ನು ನಿಲ್ಲಿಸುವಿ. ಅಂತರಾಳದಲ್ಲಿ, ನಾವು ನಿಜವಾಗಿಯೂ ಪ್ರಾರ್ಥನೆಯಲ್ಲಿ ನಂಬುತ್ತೇವೆಯೋ? "ತತ್ವಜ್ಞಾನಿಯು ತುದಿಗಾಲ ಮೇಲೆ ನೋಡುವದಕ್ಕಿಂತ ಹೆಚ್ಚಾದದ್ದನ್ನು ಕ್ರೈಸ್ತನು ತನ್ನ ಮೊಣಕಾಲುಗಳ ಮೇಲೆ ನೋಡುವನು."[1]

ಪ್ರಾರ್ಥಿಸುವದನ್ನು ನಿಲ್ಲಿಸಬೇಡ,
ಮತ್ತು ಉತ್ತರವು ತಡವಾದರೆ,
ಕಾದುಕೊಂಡಿರು, ದೇವರು ಬರುವನು
ಮತ್ತು ಆತನು ಎಂದೂ ಬಹಳ ತಡವಾಗಿ ಬರುವದಿಲ್ಲ.

(4) *ದೇವರು "ಬದಲು ಕೊಡುತ್ತಾನೆ."* ಆತನು ಯಾವುದೋ ಭಿನ್ನ ವಾದದ್ದನ್ನು ಇಲ್ಲವೇ ಇನ್ನೂ ಹೆಚ್ಚು ಉತ್ತಮವಾದದ್ದನ್ನು ಕಳುಹಿಸುತ್ತಾನೆ - ನಾವು ಕೇಳು ವುದಕ್ಕಿಂತ ಹೆಚ್ಚಾದದ್ದನ್ನು ಆತನು ನಮಗೆ ಕೊಡುತ್ತಾನೆ. ಪಾಲೆಸ್ತೀನನ್ನು ಪ್ರವೇಶಿಸಲು ಮೋಶೆಯು ಪ್ರಾರ್ಥಿಸಿದನು. ದೇವರು ಅವನ ಬಿನ್ನಹವನ್ನು ತಿರಸ್ಕರಿಸಿದನು, ಆದರೆ ಮೋಶೆಯು ಅದನ್ನು ಪಿಸ್ಗಾದಿಂದ ಮತ್ತು ರೂಪಾಂತರ ಬೆಟ್ಟದಿಂದ ದೃಷ್ಟಿಸುವದಕ್ಕೆ ಅಪ್ಪಣೆಕೊಟ್ಟನು. ಯೇಸುವು ಲಾಜರನನ್ನು ಗುಣಪಡಿಸಲಿಕ್ಕೆ ಹಿಂದಿರುಗಿ ಬರಲಿಲ್ಲ, ಆದರೆ ಆತನು ಅವನನ್ನು ಸತ್ತವರೊಳಗಿಂದ ಎಬ್ಬಿಸಿದನು (ಯೋಹಾನ 11:43, 44). ಮಾರ್ಥಳು ಯೇಸುವನ್ನು ಪುನರುತ್ಥಾನದಂತೆ ಮತ್ತು ಜೀವದಂತೆ ನೋಡಲಿಕ್ಕಾಗುವಂತೆ ಯೇಸುವು ಲಾಜರನನ್ನು ಎಬ್ಬಿಸಿದನು. ದುಃಖಪಡುತ್ತಿದ್ದ ಸ್ತ್ರೀಗೆ ಯೇಸುವಿನಿಂದ ಅತಿ ದೊಡ್ಡ ಪುನರುತ್ಥಾನದ ಬೋಧನೆಯು ಕೊಡಲ್ಪಟ್ಟಿತು. ಮಕ್ಕಳಿಗೆ ಅವರು ಬಯಸಿದ್ದನ್ನು ತಂದೆತಾಯಿಗಳು ಕೊಡಲಾರದವರಾಗಿದ್ದಾಗ, ಕೆಲವು ಸಲ ಅದಕ್ಕಿಂತ ಹೆಚ್ಚು ಉತ್ತಮ ವಾದದ್ದನ್ನು ಬದಲಾಗಿ ಕೊಡುವರು. ಪೌಲನು ಈ ವಿವಾದವನ್ನು ರೋಮಾಪುರ 8:31, 32ರಲ್ಲಿ ಎಬ್ಬಿಸಿದನು: "ಹಾಗಾದರೆ ಈ ವಿಷಯಗಳಲ್ಲಿ ನಾವು ಏನು ಹೇಳೋಣ? ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು? ಸ್ವಂತ ಮಗನನ್ನು ಉಳಿಸಿಕೊಳ್ಳದೇ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿಕೊಟ್ಟನಲ್ಲಾ; ಮಗನನ್ನು ಕೊಟ್ಟ ಮೇಲೆ ಸಮಸ್ತವನ್ನೂ ನಮಗೆ ದಯಪಾಲಿಸದೆ ಇರುವನೇ?"

ಸಿವಿಲ್ ಯುದ್ಧದಲ್ಲಿ ಒಂದು ಒಕ್ಕೂಟದ ಸೈನಿಕನು ಅದನ್ನು ಚೆನ್ನಾಗಿ ಹೇಳಿದ್ದಾನೆ

ನಾನು ಸಾಧಿಸುವುದಕ್ಕಾಗಿ, ಶಕ್ತಿಗಾಗಿ ನಾನು ದೇವರನ್ನು ಬೇಡಿಕೊಂಡೆ,
ವಿಧೇಯನಾಗಲು ದೀನತೆಯಿಂದ ನಾನು ಕಲಿಯಲಿಕ್ಕಾಗುವಂತೆ, ನಾನು
ಬಲಹೀನನಾಗಿ ಮಾಡಲ್ಪಟ್ಟೆನು ...
ನಾನು ಹೆಚ್ಚು ದೊಡ್ಡ ಸಂಗತಿಗಳನ್ನು ಮಾಡಲಿಕ್ಕಾಗುವಂತೆ, ನಾನು ಆರೋಗ್ಯ
ಕ್ಕಾಗಿ ಬೇಡಿಕೊಂಡೆನು, ನಾನು ಹೆಚ್ಚು ಉತ್ತಮ ಸಂಗತಿಗಳನ್ನು
ಮಾಡಲಿಕ್ಕಾಗುವಂತೆ ನನಗೆ ಬಲಹೀನತೆ ಕೊಡಲ್ಪಟ್ಟಿತು ...
ನಾನು ಸುಖದಿಂದಿರಲಿಕ್ಕಾಗುವಂತೆ, ನಾನು ಐಶ್ವರ್ಯಗಳಿಗಾಗಿ ಬೇಡಿಕೊಂಡೆ,
ನಾನು ಬುದ್ಧಿವಂತನಾಗಿರಲಿಕ್ಕಾಗುವಂತೆ, ನನಗೆ ಬಡತನವು ಕೊಡಲ್ಪಟ್ಟಿತು ...
ನನಗೆ ಜನರಿಂದ ಹೊಗಳಿಕೆಯಿರಲಿಕ್ಕಾಗುವಂತೆ, ನಾನು ಬಲಕ್ಕಾಗಿ ಬೇಡಿ
ಕೊಂಡೆನು,
ನಾನು ದೇವರ ಅಗತ್ಯತೆಯನ್ನು ಭಾವಿಸಲಿಕ್ಕಾಗುವಂತೆ, ನನಗೆ ಬಲಹೀನತೆಯು
ಕೊಡಲ್ಪಟ್ಟಿತು ...
ನಾನು ಜೀವನವನ್ನು ಅನುಭವಿಸಲಿಕ್ಕಾಗುವಂತೆ, ನಾನು ಎಲ್ಲಾ ಸಂಗತಿಗಳಿಗಾಗಿ
ಬೇಡಿಕೊಂಡೆನು,
ನಾನು ಎಲ್ಲಾ ಸಂಗತಿಗಳನ್ನು ಅನುಭವಿಸಲಿಕ್ಕಾಗುವಂತೆ ನನಗೆ ಜೀವವು
ಕೊಡಲ್ಪಟ್ಟಿತು ...
ನಾನು ಕೇಳಿದಂಥ ಯಾವುದನ್ನೂ ನಾನು ಪಡೆದುಕೊಳ್ಳಲಿಲ್ಲ,
ಆದರೆ ನಾನು ನಿರೀಕ್ಷಿಸಿದಂಥ ಪ್ರತಿಯೊಂದನ್ನೂ ಪಡೆದುಕೊಂಡೆನು.

ಹೆಚ್ಚಾಗಿ ನನ್ನ ಹೊರತಾಗಿದ್ದರೂ, ನನ್ನ ಮಾತಾಡಿರದ ಪ್ರಾರ್ಥನೆಗಳು
ಉತ್ತರಿಸಲ್ಪಟ್ಟಿದ್ದವು.
ನಾನು, ಎಲ್ಲಾ ಜನರ ಮಧ್ಯದಲ್ಲಿ, ಅತೀ ಹೆಚ್ಚಾಗಿ ಅಶೀರ್ವದಿಸಲ್ಪಟ್ಟಿರುವೆನು.

ಸೊಲೊಮೋನನು ಜ್ಞಾನಕ್ಕಾಗಿ ಬೇಡಿಕೊಂಡನು (1 ಅರಸುಗಳು 3:6-9). ದೇವರು ಅವನಿಗೆ ಜ್ಞಾನವನ್ನು ಮಾತ್ರವೇ ಕೊಡಲಿಲ್ಲ, ಆದರೆ ಐಶ್ವರ್ಯವನ್ನೂ ಸಮಾಧಾನವನ್ನೂ ಬಲವನ್ನೂ ಕೊಟ್ಟನು. ಮನುಷ್ಯನು ತನ್ನ ಸಣ್ಣಪ್ರಾರ್ಥನೆಗಳು ಉತ್ತರಿಸಲ್ಪಡದೇ ಇದ್ದಾಗ ಬಹಳ ಸಲ ನಿರಾಶನಾಗುತ್ತಾನೆ. ಮನುಷ್ಯನ ಪ್ರಾರ್ಥನೆಗಳು ಬಹಳ ಸದ್ಗುಣವಾಗಿರುವಾಗ ದೇವರು ನಿರಾಶನಾಗುತ್ತಾನೆ.

(5) *ದೇವರು "ನಮ್ಮನ್ನು ಬದಲಾಯಿಸುತ್ತಾನೆ."* ದೇವರು ನಮ್ಮನ್ನು ಬದಲಾಯಿಸುವದರಿಂದ, ಪ್ರಾರ್ಥನೆಯು ಪರಿಸ್ಥಿತಿಗಳನ್ನು ಬದಲಾಯಿಸುತ್ತದೆ. ನಮ್ಮನ್ನು ಬದಲಾಯಿಸುವುದು ಪರಿಸ್ಥಿತಿಗಳನ್ನು ಬದಲಾಯಿಸುವದಕ್ಕಿಂತ ದೊಡ್ಡದಾಗಿರುತ್ತದೆ. ಯಾರಾದರೊಬ್ಬನಲ್ಲಿ ನಂಬಿಕೆಯನ್ನಿಡುವುದು ಆ ಒಬ್ಬನಿಗೆ ನಿನ್ನನ್ನು ಒಪ್ಪಿಸಿಕೊಡುವುದಾಗಿದೆ. ನಾವು ಪ್ರಾರ್ಥಿಸುವಾಗ, ನಾವು ಬದಲಾಗಲು ಸಿದ್ಧರಾಗಿರಬೇಕು. ನಾವು ಪ್ರಾರ್ಥಿಸುವಾಗ, ನಾವು ಪ್ರಾರ್ಥಿಸಿರದಿದ್ದರೆ, ಪರಿಣಾಮವು ಭಿನ್ನವಾದದ್ದಾಗಿರುತ್ತದೆ. ನಾವು ಹೆಚ್ಚು ಬಲಕ್ಕಾಗಿ ಪ್ರಾರ್ಥಿಸಬೇಕು ಮತ್ತು ಕೆಲವೇ ಸಮಸ್ಯೆಗಳಿಗಾಗಿ ಅಲ್ಲ. ಸುಲಭವಾದ ಭಾರಕ್ಕಾಗಿ ಅಲ್ಲ, ಆದರೆ ವಿಶಾಲವಾದ ಭುಜಗಳಿಗಾಗಿ ಪ್ರಾರ್ಥಿಸಬೇಕು. ಉತ್ತರಿಸಲ್ಪಟ್ಟ ಪ್ರಾರ್ಥನೆಯಲ್ಲಿ ಅತಿ ದೊಡ್ಡ ಆಶ್ಚರ್ಯವು ಆಶೀರ್ವಾದಗಳಾಗಿರದೇ ಇರಬಹುದು - ಅದು ನಮ್ಮ ಜೀವಿತಗಳಲ್ಲಿ ದೇವರನ್ನು ಕೃತ್ಯದಲ್ಲಿ ನೋಡುವುದಾಗಿದೆ. ನಮ್ಮ ಜೀವಿತಗಳಲ್ಲಿ ದೇವರನ್ನು ಕೃತಿಗಳಲ್ಲಿ ತಿಳಿಯುವುದು ಭಯಭಕ್ತಿಯಿಂದ ತುಂಬಿದ್ದಾಗಿರುತ್ತದೆ! ಪ್ರಾರ್ಥಿಸುವುದು ಬದಲಾಗುವುದಾಗಿದೆ, ದೇವರಿಗೆ ತೆರೆದಿರುವುದಾಗಿದೆ.

(6) *ದೇವರು ನಮಗೆ "ದೇವರನ್ನು" ಕೊಡುತ್ತಾನೆ.* ದೇವರು ನಮಗೆ ಕೊಟ್ಟರೆ, ಕೆಲವು ಉತ್ತರಗಳನ್ನು ನಾವು ನಿಜವಾಗಿಯೂ ನಿರ್ವಹಿಸಲಾರೆವು. ನಮಗೆ ವಿವರಣೆಗಳ ಅಗತ್ಯತೆಯಿರುವುದಿಲ್ಲ. - ನಮಗೆ ದೇವರ ಅಗತ್ಯತೆಯಿರುತ್ತದೆ. ದೇವರು! ದೇವರು ತಾನೇ ಬರುವನು, ದೇವರು ಸರ್ವಶಕ್ತನಾಗಿರುವದರಿಂದ ಪ್ರಾರ್ಥನೆಯು ಬಲವುಳ್ಳದ್ದಾಗಿದೆ. ಪ್ರಾರ್ಥನೆಯು ನಮ್ಮನ್ನು ದೇವರ ಸನ್ನಿಧಿಯಲ್ಲಿ ಇಡುತ್ತದೆ. ದೇವರೊಂದಿಗೆ ನಾವು ಹೆಚ್ಚು ಸಮಯ ಕಳೆಯುವುದು; ಹೆಚ್ಚೆಚ್ಚಾಗಿ ನಾವು ದೇವರಂತಾಗುವಂತೆ ಮಾಡುವುದು. ನಾವು ಆರಾಧಿಸುವ ದೇವರಂತೆ ನಾವು ಆಗುವೆವು. ದೇವರು ಮೋಶೆಯ ಬಳಿಗೆ, ದಾವೀದನ ಬಳಿಗೆ, ಯೋಬನ ಬಳಿಗೆ, ಪ್ರವಾದಿಗಳ ಬಳಿಗೆ, ಪೌಲನ ಬಳಿಗೆ ಬಂದನು. ಪ್ರಾರ್ಥನೆಯ ಅತೀ ದೊಡ್ಡ ಉತ್ತರವು ದೇವರ ಪ್ರಸನ್ನತೆಯಾಗಿರುವುದು. ದೇವರು ಯಾರು "ಆಗಿರುತ್ತಾನೆ" ಎಂಬುದು ದೇವರು ನಮಗಾಗಿ ಏನು "ಮಾಡುತ್ತಾನೆ" ಎಂಬುದಕ್ಕಿಂತ ಹೆಚ್ಚು ಮಹತ್ವದ್ದಾಗಿದೆ.

ನಾನು ತಿಳಿದಿರುವುದಿಲ್ಲ ಯಾವ ಅಸಾಧಾರಣ ವಿಧಾನಗಳಿಂದ,
ಆದರೆ ತಿಳಿದಿರುವೆನು ಇದನ್ನು, ದೇವರು ಪ್ರಾರ್ಥನೆಗೆ ಉತ್ತರ ಕೊಡುವನೆಂದು
ನಾನು ತಿಳಿದಿರುವೆನು ತನ್ನ ವಾಕ್ಯವನ್ನು ಆತನು ಕೊಟ್ಟಿರುವನು ಎಂದು,
ಪ್ರಾರ್ಥನೆಯು ಯಾವಾಗಲೂ ಕೇಳಲ್ಪಡುವುದು ಎಂದು ಅದು ನನಗೆ ಹೇಳುವುದು.
ಮತ್ತು ಬೇಗನೆಯಾಗಲೀ ಇಲ್ಲವೇ ತಡವಾಗಿಯಾಗಲೀ ಉತ್ತರಿಸಲ್ಪಡುವುದು
ಎಂದು;

ಆದುದರಿಂದ ನಾನು ಪ್ರಾರ್ಥಿಸುವೆನು, ಮತ್ತು ಶಾಂತವಾಗಿ ಕಾದುಕೊಂಡಿರುವೆನು.

ನಾನು ತಿಳಿದಿರುವದಿಲ್ಲ, ಹುಡುಕಲ್ಪಟ್ಟ ಆಶೀರ್ವಾದಗಳು
ನಾನು ಯೋಚಿಸಿದ ರೀತಿಯಲ್ಲಿಯೇ ಬರುವೆವೆಂದು;
ನನ್ನ ಪ್ರಾರ್ಥನೆಗಳನ್ನು ಆತನೊಂದಿಗೆ ಮಾತ್ರವೇ ಬಿಡುವೆನು,
ನನ್ನ ಸ್ವಂತ ಚಿತ್ತಕ್ಕಿಂತ ಆತನ ಚಿತ್ತವೇ ಬುದ್ಧಿವಂತಿಕೆಯಿಂದಿರುವುದು.
ನನ್ನ ಬಿನ್ನಹವನ್ನು ಆತನು ದಯಪಾಲಿಸುವನೆಂಬ ಭರವಸೆಯಿರುವುದು,
ಇಲ್ಲವೇ ಹೆಚ್ಚು ಆಶೀರ್ವದಿಸಲ್ಪಟ್ಟ ಕೆಲವೊಂದು ಉತ್ತರ ಕಳುಹಿಸುವನೆಂದು.
ಎಲಿಜಬೆತ್ ಎಮ್. ಹಿಕ್ಕೊಕ್

***"ಕರ್ತನೇ, ನಾನು ಪ್ರಾರ್ಥನೆಯಲ್ಲಿ ನಂಬಿಕೆ ಇಡುವದಿಲ್ಲ.***
***ನಾನು ನಿನ್ನಲ್ಲಿ ನಂಬಿಕೆಯಿಡುತ್ತೇನೆ.***
***ನಂಬಿಕೆಯಲ್ಲಿ ಪ್ರಾರ್ಥಿಸುವದನ್ನು ನನಗೆ ಕಲಿಸು."***

ಟಿಪ್ಪಣಿ
[1]Augustus Toplady.

© 2009 Truth for Today